ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ಎ. ಡಿ. ಬಿ. ಧನ ಸಹಾಯದಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೇರಿದ ರಾಮನಗರ ತಾಲ್ಲೂಕಿನ ರಾಮನಗರ ಪಟ್ಟಣಕ್ಕೆ ಮಾತ್ರ ಒಳಚರಂಡಿ ವ್ಯವಸ್ಥೆಯನ್ನು ಯೋಜಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ದೇವನಹಳ್ಳಿ ತಾಲ್ಲೂಕಿನ ವಿಜಯಪುರ ಪಟ್ಟಣಕ್ಕೆ ಕರ್ನಾಟಕ ಸರ್ಕಾರ, ವಿಜಯಪುರ ಪುರಸಭೆ ನಿಧಿ ಹಾಗೂ ಜೀವವಿಮಾ ನಿಗಮದ ಸಾಲ ಸೌಲಭ್ಯದಿಂದ ಒಳಚರಂಡಿ ವ್ಯವಸ್ಥೆ ಅನುಷ್ಠಾನಗೊಳಿಸಲಾಗಿದೆ.

(ಆ) ಅಂತಹ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

(ಇ) ಸಮರ್ಪಕ ನೀರು ಸರಬರಾಜು ವ್ಯವಸ್ಥೆ ಇರುವ ಪಟ್ಟಣಗಳಿಗೆ ಮಾತ್ರ ಒಳಚರಂಡಿ ಯೋಜನೆ ಕಾರ್ಯಗತಗೊಳಿಸಬಹುದಾಗಿದ್ದು, ಅಂತಹ ಪುರಸಭೆಯವರು ಪ್ರಸ್ತುತ ಸರ್ಕಾರದ ಆರ್ಥಿಕ ಮಾದರಿಯಂತೆ ಅಂದಾಜಿನ ಶೇಕಡ 20 ರಷ್ಟು ವಂತಿಕೆಯನ್ನು ನೀಡಲು ಮುಂದೆ ಬಂದರೆ, ಆ ಪಟ್ಟಣಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸಲು ಯೋಜಿಸಲಾಗುವುದು.

(ಈ) ಬಂದಿದೆ.

(ಉ) ನೆಲಮಂಗಲ ಪಟ್ಟಣ ಪಂಚಾಯ್ತಿಯು ಯೋಜನೆಯ ಅಂದಾಜು ವೆಚ್ಚದ ಶೇ. 20 ರಷ್ಟನ್ನು ಅದರ ವಂತಿಗೆಯಾಗಿ ನೀಡಲು ಒಪ್ಪಿ ಜಮಾ ಮಾಡಿದ್ದಲ್ಲಿ, ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಪೆಬ್ರಿನ್ ರೋಗ ನಿವಾರಣೆಯಲ್ಲಿ ನಡೆದ ಅವ್ಯವಹಾರ

1604 (1951) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದಲ್ಲಿ ರೇಷ್ಮೆ ಇಲಾಖೆಯು ಬಿತ್ತನೆ ಗೂಡು ವಲಯದಲ್ಲಿ ಪೆಬ್ರಿನ್ ರೋಗವು ಹರಡಿರುವುದು ನಿಜವಲ್ಲವೇ; ಹಾಗಿದ್ದಲ್ಲಿ ರೋಗ ನಿಯಂತ್ರಣಕ್ಕಾಗಿ ಕೈಗೊಂಡ ಕ್ರಮಗಳೇನು; ಸದರಿ ವಲಯಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿರುವುದು ನಿಜವಲ್ಲವೇ; ಹಾಗಿದ್ದಲ್ಲಿ ಈ ವಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಅಧಿಕಾರಿಯವರು ಕೇಂದ್ರ ಸ್ಥಾನವನ್ನು ಬೆಂಗಳೂರಿನಲ್ಲಿದ್ದು 3 ವಿಭಾಗದ ಕಾರ್ಯಭಾರವನ್ನು ನಿರ್ವಹಿಸುತ್ತಿರುವುದು ನಿಜವಲ್ಲವೇ;

(ಆ) ಹಾಗಿದ್ದಲ್ಲಿ ಸದರಿ ಅಧಿಕಾರಿಯವರು 3 ವಿಭಾಗದ ಕಾರ್ಯಭಾರವನ್ನು ಸೂಕ್ತವಾಗಿ ನಿರ್ವಹಿಸುವಲ್ಲಿ ವಿಫಲರಾಗಿರುವುದರಿಂದ ಬಿತ್ತನೆ ರೇಷ್ಮೆ ಗೂಡು ವಲಯವು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಈ ರೀತಿ ಕಾರ್ಯಭಾರವನ್ನು ನಿರ್ವಹಿಸಲು ಅವಕಾಶ ಮಾಡಿಕೊಟ್ಟ ರೇಷ್ಮೆ ಕೃಷಿ ಅಭಿವೃದ್ಧಿ ಮುಖ್ಯಸ್ಥರು ತಪ್ಪು ನಿರ್ಧಾರಗಳಿಂದಾಗಿ ಈ ರೋಗ ಹರಡಲು ಕಾರಣಕರ್ತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ನಿಜವಲ್ಲ

ಹೌದು

(ಆ) ಇಲ್ಲ

(ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ರೇಷ್ಮೆ ವಸ್ತ್ರಗಳ ಮಾರಾಟ ಮಳಿಗೆಯ ನವೀಕರಣಕ್ಕಾಗಿ ಮಾಡಿದ ಖರ್ಚು

1605 (1952) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರು ನಗರದ ಕೆಂಪೇಗೌಡ ರಸ್ತೆಯ ಜನತಾ ಬಜಾರ್ ಆವರಣದಲ್ಲಿರುವ ಸರ್ಕಾರಿ ಹುರಿ ಮತ್ತು ನೇಯ್ಗೆ ಕಾರ್ಖಾನೆ, ಮುಡಿಗುಂಡಂನಲ್ಲಿ ಉತ್ಪಾದಿಸಲಾದ ರೇಷ್ಮೆ ವಸ್ತ್ರಗಳ ಮಾರಾಟ ಮಳಿಗೆಯನ್ನು ಈ ಹಿಂದೆ ಸುಮಾರು 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ವಿನ್ಯಾಸಗೊಳಿಸಿರುವುದು ನಿಜವಲ್ಲವೇ? ಸದರಿ ಮಳಿಗೆಯನ್ನು ಪುನಃ 1999ನೇ ಸಾಲಿನಲ್ಲಿ ಸುಮಾರು 6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ವಿನ್ಯಾಸಗೊಳಿಸಲು ಕಾರಣವೇನು? ವಿನ್ಯಾಸಗೊಳಿಸಲು ಟೆಂಡರ್ ಕರೆಯಲಾಗಿದೆಯೇ; ಅಥವಾ ಸರ್ಕಾರ ಈ ಬಗ್ಗೆ ಅನುಮೋದನೆ ನೀಡಲಾಗಿದೆಯೇ (ವಿವರ ನೀಡುವುದು)

(ಆ) ವಿನ್ಯಾಸಗೊಳಿಸುವ ಪೂರ್ವದಲ್ಲಿ ಪ್ರತಿತಿಂಗಳು ಮಾರಾಟದಿಂದ ಬರುತ್ತಿದ್ದ ಹಣವೆಷ್ಟು; ಹಾಗೂ ವಿನ್ಯಾಸಗೊಳಿಸುವ ಪೂರ್ವಕ್ಕಿಂತಲೂ ಈಗ ಅಂದರೆ ಆಗಸ್ಟ್ ಮಾಹೆಯಲ್ಲಿ ನಿಗದಿಪಡಿಸಿದ ಮಾರಾಟ ದರ ದ್ವಿಗುಣಗೊಳಿಸಿರುವುದು ನಿಜವಲ್ಲವೇ; ಇದರಿಂದಾಗಿ ಗ್ರಾಹಕರಿಗೆ ವಂಚನೆ ಮಾಡಿದಂತಾಗುವುದಿಲ್ಲವೇ ಹಾಗೂ ಅದಕ್ಕಾಗಿ ಸರ್ಕಾರ ಆದೇಶವೇನಾದರೂ ನೀಡಲಾಗಿದೆಯೇ?

(ಇ) ಹಾಗಿದ್ದಲ್ಲಿ ಇದರ ಮುಖ್ಯಸ್ಥರು ಏಕಾಏಕಿಯಾಗಿ ದರವನ್ನು ದ್ವಿಗುಣಗೊಳಿಸಲು ಕಾರಣವೇನು? ಈ ಸಂಬಂಧದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

(ಅ) ಇಲ್ಲ. ಸರ್ಕಾರಿ ರೇಷ್ಮೆ ಪರಿಷ್ಕರಣಾ ಮತ್ತು ಪರೀಕ್ಷಾ ಕೇಂದ್ರದ ಕಛೇರಿಯ ಒಂದು ಭಾಗವನ್ನು ರೇಷ್ಮೆ ವಸ್ತ್ರಗಳ ಮಾರಾಟ ಮಳಿಗೆಯನ್ನಾಗಿ ವಿನ್ಯಾಸಗೊಳಿಸಲು 1993-94ನೇ ಸಾಲಿನಲ್ಲಿ ರೂ. 6.60 ಲಕ್ಷ ಖರ್ಚು ಮಾಡಲಾಗಿದೆ. 1999-2000ನೇ ಸಾಲಿನಲ್ಲಿ ಅಂದರೆ